ಶ್ರೀ ವಿ. ಶ್ರೀನಿವಾಸ್ ಪ್ರಸಾದ್ : ಸರಿ. ಅದನ್ನು ನೀವು ಸಮರ್ಥನೆಯನ್ನೂ ಮಾಡಿಕೊಳ್ಳುವುದಿಲ್ಲ, ನಿಷೇಧವನ್ನೂ ಮಾಡುವುದಿಲ್ಲ, ವಿರೋಧವನ್ನೂ ಮಾಡುವುದಿಲ್ಲ. ದ್ವಂದ್ವ ನೀತಿ ಅನುಸರಿಸುತ್ತೀರಿ. ಅದನ್ನು ಒಂದು ಕ್ಷಣದಲ್ಲಿ ಮಾಡಬಹುದು. ಅಂಥ ಅಮಾನುಷವಾದಂಥದ್ದು. ನೀವೊಬ್ಬ ಸಚಿವರಾಗಿ ಅದು ನಿಮ್ಮ ತಲೆಗೇ ಹೋಗುವುದಿಲ್ಲ. ಆ ವಿಷಯ ಚರ್ಚೆಗೆ ಬಂದಾಗ ಮಾತನಾಡೋಣ. ಇದಕ್ಕೆ ನೀವು ಇಷ್ಟು ಆತುರ ಪಡುತ್ತೀರಲ್ಲ? ಇದರಲ್ಲಿ ಏನಿದೆ ಎಂದು ಮಾಡುತ್ತೀರಿ?

4. ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (2ನೇ ತಿದ್ದುಪಡಿ) ವಿಧೇಯಕ, 2011

ಪರ್ಯಾಲೋಚನಾ ಪ್ರಸ್ತಾವ

ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಹಾಗೂ ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2011ನೇ ಸಾಲಿನ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ(2ನೇ ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : Explain ಮಾಡಿ.

ಡಾ: ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಹಾಗೂ ಮುಜರಾಯಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾರ್ಚ್ ತಿಂಗಳಿನಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ವಿಧೇಯಕಕ್ಕೆ ಕೆಲವು ತಿದ್ದುಪಡಿಗಳನ್ನು ತಂದಾಗ ಕೆಲವರಿಂದ ಈ ಸದನದಲ್ಲಿ ಮತ್ತು ಆ ಸದನದಿಂದ ಅನೇಕ ಸಲಹೆಗಳು ಬಂದಿತ್ತು. ಆ ಸಲಹೆಗಳನ್ನು ಕಾರ್ಯ ರೂಪಕ್ಕೆ ತಂದು ಇದರಲ್ಲಿ ಸೇರಿಸುವ ಬಗ್ಗೆ ಇವತ್ತು 2ನೇ ತಿದ್ದುಪಡಿಯನ್ನು ತಂದಿದ್ದೇವೆ. ಅದರಲ್ಲಿ ಬಹಳ ಪ್ರಮುಖವಾಗಿ, 1997ನೇ ಇಸವಿಯ ಕಾನೂನು, ತಾವು ಸರ್ಕಾರದಲ್ಲಿ ಆಗ ಉಪ ಮುಖ್ಯಮಂತ್ರಿಯಾಗಿದ್ದ

ಸಂದರ್ಭದಲ್ಲಿ ಆ ನಂತರ ಆ ಕಾಯ್ದೆಯ ರೂಪವಾಗಿ Present ಆಗಿರುವಂಥದ್ದು. ಮಾನ್ಯ ಎಸ್.ಎಂ. ಕೃಷ್ಣರವರ ಕಾಲದಲ್ಲಿ, ಅದಕ್ಕೆ High Court ನಲ್ಲಿ ಕೆಲವು ನಿರ್ಬಂಧಗಳು ಬಂದ ನಂತರ Supreme Court ಗೆ appeal ಗೆ ಹೋದಾಗ ಒಂದು Section ಅನ್ನು ಹೊರತುಪಡಿಸಿ ಉಳಿದೆಲ್ಲವನ್ನೂ ಜಾರಿಗೆ ತಂದರು. ಬಹಳ ಪ್ರಮುಖವಾದ ಆ ಒಂದು Section ಯಾವುದೆಂದರೆ, ದೇವಸ್ಥಾನದ ಆಡಳಿತ ಸಮಿತಿಯನ್ನು ನೇಮಕ ಮಾಡುವುದಕ್ಕೆ ವ್ಯಾಪಕವಾದ ವ್ಯವಸ್ಥೆಯಾಗಬೇಕೆನ್ನುವ suggestion ಕೊಟ್ಟ ಪ್ರಕಾರ, ಅದನ್ನು incorporate ಮಾಡಿದ್ದೇವೆ. ಆದರೆ, ಆ Section ಇಲ್ಲದೇ ಇದ್ದಾಗ ಆ Section ಗೆ ಹೇಗೆ ತಿದ್ದುಪಡಿ ತಂದಿರಿ ಎಂದು ಹೇಳುವಂಥ ಪ್ರಸ್ತಾಪ ಬಂದಾಗ, ಈಗ ಅದಕ್ಕೋಸ್ಕರ ಹಿಂದಿನ 25ನೇ Section ತೆಗೆದು ಹೊಸ Section ಅನ್ನು ಆ ಜಾಗದಲ್ಲಿ ಇವತ್ತು ಹಾಕುವಂಥ ಕೆಲಸವನ್ನು ಕೋರ್ಟ್ ಹೇಳಿದ ಪ್ರಕಾರ ಮಾಡಿದ್ದೇವೆ. ಅದರ ಜೊತೆಗೆ, ಬೇರೆ ಕೆಲವು ಪ್ರಾಸಂಗಿಕವಾಗಿ clarifications ಕೊಡುವಂಥದ್ದು ಅಲ್ಲಲ್ಲಿ ಕೊಟ್ಟಿದ್ದೇವೆ. ಅಷ್ಟು ಬಿಟ್ಟರೆ ಬೇರೆ ಯಾವುದೂ ಇಲ್ಲ. ಇದರಿಂದ ಕಾನೂನಿನ ನಿರ್ವಹಣೆಯಲ್ಲಿ ಸ್ಪಷ್ಟತೆ ಮತ್ತು ನಮ್ಮ ದೇವಸ್ಥಾನಗಳ ಆಡಳಿತದಲ್ಲಿ ಹೊಸ ಚೈತನ್ಯವನ್ನು ತರುವಂಥ ಪ್ರಯತ್ನವನ್ನು ಮಾಡಲಿಕ್ಕಾಗುತ್ತದೆ. ಆ ದೃಷ್ಟಿಯಿಂದ ಈ ಸದನ ಅದಕ್ಕೆ ಬೇಕಾದಂಥ ಒಪ್ಪಿಗೆಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಇದಕ್ಕೆ ಬಹಳ ತುರ್ತು ಅಗತ್ಯ ಏನೂ ಇರಲಿಲ್ಲ. ಇದನ್ನು ನಿಧಾನವಾಗಿ ಮಾಡಬಹುದಿತ್ತು. ಏನೂ ಆಗುತ್ತಿರಲಿಲ್ಲ. ಆದರೂ ಆಚಾರ್ಯರವರು ಮೇಲ್ಮನೆಯಲ್ಲಿ ಇದನ್ನು ಪಾಸ್ ಮಾಡಿಸಿಕೊಂಡು ಬಂದಿದ್ದಾರೆ. ಇದನ್ನು ನಾನಿನ್ನೂ ಓದಿಲ್ಲ. ಈಗ ಸುಮ್ಮನೆ ಇದರ ಮೇಲೆ ಕಣ್ಣಾಡಿಸಿದೆ. ಅದಕ್ಕೇ ಇದನ್ನು ಇನ್ನೊಂದು ದಿನ ಚರ್ಚೆಗೆ ತೆಗೆದುಕೊಳ್ಳೋಣ ಎಂದು ಹೇಳಿದ್ದು. ಇಲ್ಲಿ ಒಂದು exemption clause ಕೊಟ್ಟಿದ್ದೀರಿ. ಇದೇಕೆ ಬೇಕು? ಮಠಗಳಿಗೆ ಸೇರಿರುವ ದೇವಸ್ಥಾನಗಳ ಬಗ್ಗೆ ಹೇಳಿದ್ದೀರಿ. ಅದಕ್ಕೇ ಸರಿಯಾಗಿ ಓದದೇ ಬಂದರೆ ಇದೇ ತಾಪತ್ರಯ ನಮಗಾಗುವುದು. 19ನೇ ಪ್ರಕರಣಕ್ಕೆ ತಿದ್ದುಪಡಿ ಮಾಡುತ್ತಿದ್ದೀರಿ. 1ನೇ ಪ್ರಕರಣದ ತಿದ್ದುಪಡಿ ಎಂದು ಹೇಳುತ್ತಿದ್ದೀರಿ. "(1) ಇದು, 23ನೇ ಪ್ರಕರಣದ ಅಡಿಯಲ್ಲಿ ಅಧಿಸೂಚಿಸಿದ ಎಲ್ಲಾ ಧಾರ್ಮಿಕ ಸಂಸ್ಥೆಗಳು ಅಥವಾ

ಧರ್ಮಾದಾಯ ದತ್ತಿಗಳಿಗೆ ಅನ್ವಯವಾಗತಕ್ಕದ್ದು. 23ನೇ ಪ್ರಕರಣದಡಿಯಲ್ಲಿ ಅಧಿಸೂಚಿಸಿದವುಗಳನ್ನು ಹೊರತುಪಡಿಸಿ ಎಲ್ಲಾ ಧಾರ್ಮಿಕ ಸಂಸ್ಥೆಗಳು ಅಥವಾ ಧರ್ಮಾದಾಯ ದತ್ತಿಗಳಿಗೆ 53ನೇ ಪ್ರಕರಣ ಮತ್ತು ಅಧ್ಯಾಯ VIII ಅನ್ವಯವಾಗತಕ್ಕದ್ದು: ಪರಂತು . . ." ಅನ್ವಯವಾಗುತ್ತದೆಂದು ಹೇಳುತ್ತೀರಿ. 'ಪರಂತು' ಎಂಬ ಪದವನ್ನು ಎಲ್ಲಿ ಹುಡುಕುತ್ತೀರಿ? ಪರಂತು ಎಂದರೇನು? Provided ಎಂದು ಅರ್ಥವೇ? ಆದರೆ ಎಂದು ಬರೆಯಿರಿ. ಇದನ್ನು ಹಾಕಿ ಯಾರಿಗೂ ಅರ್ಥವಾಗಬಾರದೆಂದೇ? ಆಡು ಭಾಷೆಯಲ್ಲಿ ಇಂಥ ಪದಗಳನ್ನು ಹಾಕಿ. ಕುವೆಂಪು, ಯಾವ ಭಾಷೆ ಸಾಮಾನ್ಯ ಜನರಿಗೆ ಅರ್ಥವಾಗುವುದಿಲ್ಲವೋ ಅಂಥ ಕಡೆ ಆಡು ಭಾಷೆ ಬಳಸಿ ಎಂದು ಹೇಳಿದ್ದರು. ಇದು ಒಂದು ಮಠಕ್ಕೆ ಅಥವಾ ಮಠಕ್ಕೆ ಸೇರಿದ ಅಥವಾ ಅದು ನಿರ್ವಹಿಸುತ್ತಿರುವ ದೇವಸ್ಥಾನಕ್ಕೇಕೆ ಇದು ಏಕೆ ಅನ್ವಯವಾಗುವುದಿಲ್ಲ? ಅವರಿಗೇಕೆ exemption? ಉದಾಹರಣೆಗೆ, ಉಡುಪಿ ಕೃಷ್ಣ ದೇವಸ್ಥಾನವನ್ನು ಉಡುಪಿ ಮಠಕ್ಕೆ ವಹಿಸಿದಿರಿ. ಈಗ ಅಲ್ಲಿ ಬರುವ ಆದಾಯವನ್ನು ಏನು ಮಾಡಬೇಕು ಆ ಆದಾಯ ಯಾರಿಗೆ ಹೋಗುತ್ತದೆ? ಅಂದರೆ ಮಠಕ್ಕೆ ಹೋಗುತ್ತದೆ. ಜನರು ಕೊಡುವ ಆ ಹಣಕ್ಕೆ ಲೆಕ್ಕಪತ್ರ ಇಲ್ಲವೇ? ಗೋಕರ್ಣ ದೇವಸ್ಥಾನವನ್ನೂ ಹಾಗೇ ಮಾಡಿದಿರಿ. ಅದನ್ನು ಯವುದೋ ಮಠಕ್ಕೆ ವಹಿಸಿದಿರಿ. ಅವರಿಗೆ ವಹಿಸಿ exemption ಕೊಟ್ಟಿದ್ದೀರಿ. ಏನು ಮಾಡುವುದು ಹೇಳಿ? ನಾವು ಇದನ್ನು ವಿರೋಧ ಮಾಡಬೇಕೋ, ಬೇಡವೋ? ಉಡುಪಿ ಕೃಷ್ಣ ದೇವಸ್ಥಾನದ ಕಥೆ ಅಥವಾ history ಹೇಳುತ್ತೇನೆ. ಆ ಕತೆ ನಿಮಗೆ ಗೊತ್ತೇ ಇರುತ್ತದೆ. ಆ ಉಡುಪಿ ಕೃಷ್ಣ ದೇವಸ್ಥಾನದ ವಿಷಯ Supreme Court ವರೆಗೆ ಹೋಗಿದೆ. ಉಡುಪಿ ಮಠದವರು ಆ ದೇವಸ್ಥಾನ ತಮಗೆ ಸೇರಬೇಕು, ತಮಗೆ ಕೊಡಿ ಎಂದು ಹೇಳುತ್ತಾರೆ. ಆದರೆ, 1961ನೇ ಇಸವಿಯಲ್ಲಿ ಅದು ಸಾರ್ವಜನಿಕವಾಗಿರಬೇಕೆಂದು Supreme Court decision ಕೊಟ್ಟಿದೆ. In spite of the decision, Government decision ಮಾಡಿ ಅವರಿಗೆ ಕೊಟ್ಟಿರಿ. ನನ್ನ ಪ್ರಕಾರ ಉಡುಪಿ ದೇವಸ್ಥಾನದಲ್ಲಿ 3 ಕೋಟಿ ರೂಪಾಯಿ ಆದಾಯ ಬರುತ್ತಿರಬಹುದು. ಅದನ್ನು ಕೊಡುವವರಾರು? ಅದಕ್ಕೆ ಲೆಕ್ಕವಿಲ್ಲ. ಅದಕ್ಕೆ ಆಡಿಟ್ ಮಾಡುವುದಕ್ಕೆ ವ್ಯವಸ್ಥೆ ಏನಾದರೂ ಮಾಡುತ್ತೀರಾ? ಅದಕ್ಕೆ ಏನೂ ಇಲ್ಲ. ಹಾಗೆಯೇ, ಗೋಕರ್ಣ ದೇವಸ್ಥಾನವನ್ನು ಇನ್ನೊಂದು ಮಠಕ್ಕೆ ಅಂದರೆ ರಾಮಚಂದ್ರಾಪುರದ ಮಠಕ್ಕೆ

ಕೊಟ್ಟಿದ್ದೀರಿ. ನಿಮ್ಮ ಸರ್ಕಾರ ಬಂದ ಮೇಲೆ ವಹಿಸಿರುವುದು. ಅವರಿಗೇಕೆ ವಹಿಸಿದಿರಿ? ಅವರಿಗೆ ಅಗತ್ಯವಿತ್ತೇ? ಅವರು ನಿಮ್ಮನ್ನು ಕೇಳಿದ್ದರೇ? ಯಾರನ್ನೋ ಖುಷಿಪಡಿಸಲಿಕ್ಕೆ, ಯಾರನ್ನೋ ಸಂತೋಷಪಡಿಸಲಿಕ್ಕೆ ಯಾರದೋ ಒತ್ತಡಕ್ಕೆ ವಹಿಸಿದ್ದೀರಿ. ಉಡುಪಿ ಶ್ರೀಕೃಷ್ಣ ದೇವಸ್ಥಾನ ಉಡುಪಿ ಮಠದ್ದಲ್ಲ ಎಂದು ಹೇಳಿ there is a decision by the Supreme Court. Supreme Court decision ಇದ್ದರೂ ಕೂಡ ನೀವು ವಹಿಸಿದ್ದೀರಿ. ಅದಕ್ಕೆ ಈಗ ನೀವು exemption ತೆಗೆದುಕೊಳ್ಳುತ್ತಿದ್ದೀರಿ. ರಾಮಚಂದ್ರಾಪುರದ ಮಠಕ್ಕೆ exemption ಆಗುತ್ತದೆ. So, ಅಲ್ಲಿಗೆ ಹೋಗುವುದು ಸಾರ್ವಜನಿಕರ ಹಣ. ಅದಕ್ಕೆ ಲೆಕ್ಕವಿಲ್ಲ. ಆಯಿತು. ಮೊದಲಿನಿಂದ ಅವರ ಮಠಗಳಿಂದ ದೇವಸ್ಥಾನಗಳನ್ನು ಮಾಡಿಕೊಂಡು ಬಂದಿದ್ದಾರೆ, ಅವರೇ ಕಟ್ಟಿಕೊಂಡು ಬಂದಿದ್ದಾರೆ, ಪೂಜೆ ಮಾಡಿಕೊಂಡು ಬಂದಿದ್ದಾ we have no objection. ಈ ಉಡುಪಿ ಕೃಷ್ಣ ದೇವಸ್ಥಾನ ಸಾರ್ವಜನಿಕವಾದುದು ಎಂದು Supreme Court decision ಇದೆ. ಬೇಕಾದರೆ, 1961ನೇ ಇಸವಿಯಲ್ಲಿ Supreme Court ನಿಂದ ಆದ judgement copy ಯನ್ನು ತಂದು ನಿಮಗೆ ಕೊಡುತ್ತೇನೆ. ಆ ಮಠದವರು appeal ಹೋಗಿದ್ದಾರೆ. ಆಗ Madras High Court ನಲ್ಲಿ ತಿರ್ಮಾನವಾಗಿದೆ. Not here. ಉಡುಪಿ, ಮಂಗಳೂರು ಮದ್ರಾಸ್ state ನಲ್ಲಿದ್ದಾಗ Madras High Court ನಲ್ಲಿ ತೀರ್ಮಾನವಾಗಿದೆ. I have gone through the entire history of it. ಉಡುಪಿ ದೇವಸ್ಥಾನದಲ್ಲಿ ಕನಕನ ಕಿಂಡಿ ಎಂದು ಇದೆ. ಅದನ್ನು ನವಗ್ರಹ ಕಿಂಡಿ ಎಂದು ಮಾಡುವುದಕ್ಕೆ ಹೊರಟಿದ್ದರು. ಅದಕ್ಕೆ ನಾವೆಲ್ಲಾ ಪ್ರತಿಭಟನೆ ಮಾಡಿದೆವು. ಅಲ್ಲಿ ಕನಕನ ಗೋಪುರ ಎಂದಿದೆ. ಅದನ್ನೂ ಒಡೆದು ಹಾಕಿ ಬೇರೆ ಕಟ್ಟುವುದಕ್ಕೆ ಹೊರಟಿದ್ದರು. ಅದಕ್ಕೂ ಪ್ರತಿಭಟನೆ ಮಾಡಿದೆವು. ಕನಕನ ಕಿಂಡಿಯನ್ನು ನಾವು ಮಾಡಿದ್ದೇವೆಯೇ? It is a history. ಬದಲಾಯಿಸುವುದಕ್ಕೆ, ಅದನ್ನು ನಾವು ಮಾಡಿದ್ದಲ್ಲ. ಅಲ್ಲಿ ಕನಕನ ಕಿಂಡಿ ಇದೇ ಎನ್ನುವ ಕಾರಣಕ್ಕೋಸ್ಕರ, ಶ್ರೀಕೃಷ್ಣ ಕನಕನಿಗೆ ದರ್ಶನ ಕೊಟ್ಟಿದ್ದ ಎನ್ನುವ ಕಾರಣಕ್ಕೋಸ್ಕರ ಆ ದೇವಸ್ಥಾನಕ್ಕೆ ದೊಡ್ಡ ಮಹತ್ವ ಬಂದಿದೆ. ಅದರಿಂದ ಅಲ್ಲಿಗೆ ಜಾಸ್ತಿ ಭಕ್ತರು ಹೋಗುತ್ತಿದ್ದಾರೆ. ಹಾಗಾಗಿ, ಅಲ್ಲಿಗೆ ಆದಾಯ ಜಾಸ್ತಿ ಬರುತ್ತಿದೆ. It is history. ಅವೆಲ್ಲಾ ಆಡಿಟ್ ಆಗಬೇಕೆಂದು ಹೇಳಿ. ಯಾವ್ಯಾವ

ಮಠದ ದೇವಸ್ಥಾನಗಳನ್ನು ಖಾಸಗಿಯಾಗಿದ್ದು ಮೊದಲು ಅವರಿಗೆ ಕೊಟ್ಟಿದ್ದಾರೆ ಅದಕ್ಕೆ ಲೆಕ್ಕ ಕೊಡಬೇಕೆಂದು ಮಾಡಿ. In fact, ಆ ಉಡುಪಿ ದೇವಸ್ಥಾನದ ವಿಚಾರವಾಗಿ ಅದು ಸಾರ್ವಜನಿಕರ ದೇವಸ್ಥಾನವೆಂದು ಉಡುಪಿ ಮಠದ ಮೇಲೆ ನಾನು ಕೇಸ್ ಹಾಕಿಸಿದ್ದೇನೆ. ನಾನು ಹಾಕಿಲ್ಲ, ಬೇರೆಯವರು ಹಾಕಿದ್ದಾರೆ. ಹಾಕಿಸಿದ್ದೇನೆ ಎಂದರೆ ಏನು? ಹಾಕಿಸಿದ್ದೇನೆ. ನಾನೇ ಹೇಳಿರುವುದು. Supreme Court decision ಪ್ರಕಾರ ಹಾಕಿ ಎಂದು ಹೇಳಿದ್ದೇನೆ ಅಷ್ಟೇ. ಕಾನೂನು ಪ್ರಕಾರ ಹಾಕಿ ಎಂದು ಹೇಳಿದ್ದೇನೆ. ಬೇಕಾದರೆ ನಿಮಗೆ judgment copy ತಂದು ತೋರಿಸುತ್ತೇನೆ. Supreme Court ನಲ್ಲಿ 1961 ನೇ ಇಸ್ವಿಯಲ್ಲಿ judgment ಆಗಿದೆ. Madras High Court ನಲ್ಲಿ ಆಗಿತ್ತು ಅದರ ಮೇಲೆ Appeal ಹೋಗಿದ್ದರು, ಅಲ್ಲಿ Supreme Court ನಲ್ಲಿ judgment ಆಗಿದೆ. Before the re-organization of the states, Madras High Court ನಲ್ಲಿ ಹೋಗಿ ಕೇಸ್ ನಡೆಯಿತು. Original suit ನಡೆದು, ಆಮೇಲೆ High Court ಗೆ ಹೋಗಿ High Court ನಿಂದ Supreme Court ಗೆ ಹೋಗಿ, Supreme Court ನಲ್ಲಿ ತೀರ್ಮಾನವಾಯಿತು. ತಪ್ಪೇನಿಲ್ಲ. ಸರಿಯಾಗಿದೆ ಸ್ವಾಮಿ. ನಮ್ಮ ವಾದ ಸರಿಯಿದೆ, ನೀವು ಹೇಳಿ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಮಠ ಮತ್ತು ಮಠಕ್ಕೆ ಸೇರಿದಂಥ ದೇವಸ್ಥಾನವನ್ನು ಮೂಲ ಕಾಯಿದೆಯಿಂದಲೇ ಹೊರಗಿಟ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ನಮ್ಮ ಆಡಳಿತ ಇದೆ. ನಿನ್ನೆ ಅವರ ಆಡಳಿತ ಇತ್ತು. ಮೊನ್ನೆ ನಿಮ್ಮ ಆಡಳಿತ ಇತ್ತು. ಈ ಕಾನೂನಿನ ಒಂದು ಸಣ್ಣ history ಹೇಳುತ್ತೇನೆ. 1981 ರಲ್ಲಿ Supreme Court ಒಂದು ತೀರ್ಮಾನ ಕೊಟ್ಟಿತು. ಏನೆಂದರೆ, ಕರ್ನಾಟಕ ರಾಜ್ಯ ಐದು ಭಾಗಗಳಿಂದ ಆಗಿರತಕ್ಕಂಥದ್ದು, ಇಲ್ಲಿ ಆರು ಕಾನೂನುಗಳು ದೇವಾಲಯವನ್ನು ನಿಯಂತ್ರಣ ಮಾಡುವುದು ಇದೆ, ಇದೇನಿದು ರಾಜ್ಯ 1956 ನೇ ಇಸ್ವಿಯಲ್ಲಿ ಒಂದಾದರೂ ಒಂದು ಕಾನೂನು ಮಾಡಲಿಕ್ಕೆ ಬರಲಿಲ್ಲ, ಆದಷ್ಟು ಬೇಗ ಒಂದು integrated ಕಾನೂನು, ಇಡೀ ರಾಜ್ಯಕ್ಕೆ ಅನ್ವಯವಾಗುವ ಹಾಗೆ ಸಮಗ್ರ ಹಿಂದೂ ಧಾರ್ಮಿಕ ದತ್ತಿ ಕಾಯಿದೆ ಮಾಡಿ ಎಂದು 1981 ರಲ್ಲಿ ಕೊಟ್ಟರು. ಪ್ರಯತ್ನ ನಡೆಯುತ್ತಾ ನಡೆಯುತ್ತಾ ಬಂತು. ಕೊನೆಗೆ ಜೆ.ಹೆಚ್.ಪಟೇಲ್‌ರ ಕಾಲದಲ್ಲಿ, ತಾವು ಸರ್ಕಾರದಲ್ಲಿ ಇದ್ದಾಗ 15 ಜನ ಈ ಸದನ ಮತ್ತು 5 ಜನ ಆ ಸದನದ ಸದಸ್ಯರನ್ನೊಳ

ಗೊಂಡ 20 ಜನರ ಒಂದು Joint Select Committee ಮಾಡಿದರು. ಆ ಸಮಿತಿ ಒಂದೂವರೆ ವರ್ಷ ಬೇರೆ ಬೇರೆ ಕಡೆಗೆ ಹೋಗಿ ಅಧ್ಯಯನ ಮಾಡಿ ತಯಾರಿಸಿದಂಥ ಕಾನೂನು. ಆ ಜೆ.ಹೆಚ್. ಪಟೇಲ್‌ರವರ ನೇತೃತ್ವದ ಸರ್ಕಾರ ತಯಾರು ಮಾಡಿದಂಥ ಕಾನೂನಿನಲ್ಲಿ ಮಠ ಮತ್ತು ಮಠಕ್ಕೆ ಹೊಂದಿಕೊಂಡಿರುವ ದೇವಸ್ಥಾನಕ್ಕೆ exemption ಮಾಡಿದ್ದು ಇತ್ತು. 2003 ರಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ ಎಸ್.ಎಂ. ಕೃಷ್ಣರವರ ಕಾಲದಲ್ಲಿ ಇದು ಜಾರಿಗೆ ಬಂತು. ಆಗಲೂ ಈ ಕಾನೂನು ಇತ್ತು. ಮಠ ಮತ್ತು ಮಠಕ್ಕೆ ಹೊಂದಿಕೊಂಡಿರುವಂಥ ದೇವಸ್ಥಾನ. ಇವತ್ತು ನಾವು ತಂದಿದ್ದರಲ್ಲಿ ಇದರಲ್ಲಿ ಒಂದು ಸ್ಪಷ್ಟೀಕರಣ ಕೋರ್ಟಿನವರು ಕೇಳಿದರು. Temple and temple attached to mutt. "Mutt" and temple attached to mutt ಎಂದು ಇದೆ. Pertinent to mutt ಎಂದು ಇತ್ತು.

ಶ್ರೀ ಸಿದ್ದರಾಮಯ್ಯ : But it is not Temple transferred to mutt ಎಂದು ಇಲ್ಲ.

ಡಾ: ವಿ.ಎಸ್. ಆಚಾರ್ಯ : No, no, appurtenant. ನೋಡಿ ಹಿಂದೆ ಇದ್ದಂಥದ್ದು..

ಶ್ರೀ ಸಿದ್ದರಾಮಯ್ಯ : Temples attached to mutt ಬೇರೆ. Temples transferred by government to mutt ಎಂದು ಇಲ್ಲ.

ಡಾ: ವಿ.ಎಸ್. ಆಚಾರ್ಯ : No, no ನೋಡಿ ನೀವು ಉಡುಪಿಯ reference ಹೇಳಿದಿರಿ. ನಾನು ಉಡುಪಿಯಲ್ಲಿಯೇ ಹುಟ್ಟಿ ಬೆಳೆದು 73 ವರ್ಷವಾಯಿತು. ನಾನು ಅಲ್ಲಿಂದಲೇ ಬರುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾವು history ಓದಿಕೊಂಡು ಬಂದಿದ್ದೇವೆ.

ಡಾ: ವಿ.ಎಸ್. ಆಚಾರ್ಯ : ಡಾಕ್ಟರೆ, you please enlighten. ರಾಮಚಂದ್ರಾಪುರ ಮಠದ ಬಗ್ಗೆ ನಾನೇ ಎರಡು ಗಂಟೆ ಉತ್ತರ ಕೊಟ್ಟಿದ್ದೆ. ನಮ್ಮ ರೇವಣ್ಣನವರಿಗೆ ಆಧಾರ ಸಮೇತರಾಗಿ ಕೊಟ್ಟಿದ್ದೆ. That decision was taken during Rashtrapathi rule and only pipeline ನಲ್ಲಿ ಬಂದಾಗ, order ಕೊಡಲಿಕ್ಕೆ ಬಂದಾಗ ನಮ್ಮ ಯಡಿಯೂರಪ್ಪನವರ ಸರ್ಕಾರ ಬಂದಿತ್ತು. ಅದಕ್ಕೆ ಬೇಕಾದಂಥ ಕೆಳದಿ ಗುಂಡಾ ಜೋಯಿಸರ

documents ಎಲ್ಲವನ್ನೂ ನಾನು ಅವರ ಕೈಗೆ ಆ ದಿವಸ ಕೊಟ್ಟಿದ್ದೆ. ಹೀಗಾಗಿ, ಮಾನ್ಯ ಸಿದ್ದರಾಮಯ್ಯನವರು ಹಾಗೂ ಈ ಸದನದ ಎಲ್ಲಾ ಸದಸ್ಯರು ಈ ಕಾನೂನಿನಲ್ಲಿ ತಿಳಿದುಕೊಳ್ಳಬೇಕು. ಮೂರು-ನಾಲ್ಕೂ ರೀತಿಯ exemption ಕೊಟ್ಟಿದ್ದೇವೆ. ನಾವು ಎಲ್ಲಾ ದೇವಸ್ಥಾನಗಳಿಗೆ ಕೈ ಹಾಕುವುದಕ್ಕೆ ಹೋಗಲಿಲ್ಲ. ಒಂದನೆಯದು ಮಠ ಮತ್ತು ಮಠಕ್ಕೆ ಹೊಂದಿಕೊಂಡಿರುವಂಥ ದೇವಸ್ಥಾನ ಎಂದು ಇದ್ದಿದ್ದನ್ನು ಮಠದ ಆಡಳಿತ ಇರುವಂಥ ಎನ್ನುವ ಬಗ್ಗೆ ನೀವು clarify ಮಾಡಿ ಎಂದು High Court ನಿಂದ ಬಂದಿದ್ದರಿಂದ, ಮೂರನೆ ಕೊನೆಯ ಭಾಗದಲ್ಲಿ ಮಠ ಅಥವಾ ಮಠಕ್ಕೆ ಸೇರಿದ ಎಂದು ಮುಂಚೆ ಇತ್ತು, ಅದರೊಟ್ಟಿಗೆ ನಿರ್ವಹಿಸುತ್ತಿರುವ ಎಂದು ಹೇಳುವಂಥದ್ದು ಸ್ಪಷ್ಟೀಕರಣ ಕೊಡುವಂಥದ್ದನ್ನು ಮಾಡಿದ್ದೇವೆ. ಇದು ಒಂದು ಭಾಗ. ಎರಡನೆಯದು, ಹಿಂದೂ ಸಮಾಜದಲ್ಲಿ ಅನೇಕ denominations ಇದೆ. ತಮಗೂ ಗೊತ್ತಿದೆ. ಮೊಗವೀರರು ಇದ್ದಾರೆ, ಗೌಡ ಸಾರಸ್ವತರು ಇರಬಹುದು,.....

ಶ್ರೀ ಸಿದ್ದರಾಮಯ್ಯ : ನೀವು ಅವರನ್ನು ಏನೆಂದು ಕರೆಯುತ್ತೀರಿ?

ಡಾ: ವಿ.ಎಸ್. ಆಚಾರ್ಯ : Denominations, ವಿಭಾಗೀಯ denomination temples ಎಂದು ಅದಕ್ಕೆ ಹೇಳುತ್ತೇವೆ. ಅದರಲ್ಲಿ ವೈಶ್ಯರದ್ದು ದೇವಸ್ಥಾನಗಳಿರಬಹುದು.

ಶ್ರೀ ಸಿದ್ದರಾಮಯ್ಯ : ಜಾತಿ ದೇವಸ್ಥಾನಗಳೆಂದು ಹೇಳಿ.

ಡಾ: ವಿ.ಎಸ್. ಆಚಾರ್ಯ : ಜಾತಿ ದೇವಸ್ಥಾನಗಳು. ಈ ದೇವಸ್ಥಾನಗಳಲ್ಲಿ ಆ ಜಾತಿಯ ಗೂಡು ಕಟ್ಟಿನ ಪ್ರಕಾರ ಅವರ ವ್ಯವಸ್ಥೆ ಪ್ರಕಾರ ಆಡಳಿತ ಮಂಡಳಿ ಮಾಡಿಕೊಂಡು ಅಧಿಕಾರ ನಡೆಸಿಕೊಂಡು ಹೋಗುವಂಥ ಅಧಿಕಾರ ಕೊಟ್ಟಿದ್ದೇವೆ. ಏಕೆಂದರೆ, ಅವರಲ್ಲಿ ನಾವು ಕೈ ಹಾಕಬಾರದು ಎನ್ನುವ ದೃಷ್ಟಿಯಿಂದ ಇವತ್ತು ವಿಭಾಗೀಯ ದೇವಸ್ಥಾನಗಳ ಆಡಳಿತವನ್ನು ಹೊರಗಿಟ್ಟಿದ್ದೇವೆ. ಮೂರನೆಯದು, ಯಾವುದು ಅನುವಂಶಿಕವಾಗಿ ಬಂದಿದೆ ಅಂಥ ಅನುವಂಶಿಕತೆಯ ಆಡಳಿತವನ್ನು ಅವರ ಕೈಗೆ ಕೊಟ್ಟಿದ್ದೇವೆ. ಆದರೆ, ಅಲ್ಲಿ ಉಳಿದಂಥ ಎಲ್ಲಾ ವಿಚಾರಗಳು ಲೆಕ್ಕ, ಪತ್ರ, audit, budget, property register ಎಲ್ಲವೂ ಇದರ ಪ್ರಕಾರ ಬರಬೇಕು, they are considered as Hindu Public Temples ಅಂಥದ್ದು ಅನುವಂಶಿಕತೆದು ಮೂರನೇ ತರಹ. ನಾಲ್ಕನೇಯದು, ನಮ್ಮ ಮುಜರಾಯಿ temples. ಅದಕ್ಕೆ ಒಂಬತ್ತು ಜನರ ಆಡಳಿತ ಮಂಡಳಿ ಮಾಡಿ ಅದರಲ್ಲಿ

ಬೇರೆ ಬೇರೆ ಪಂಗಡದವರು, ಮುಖ್ಯಸ್ಥರು ಎಲ್ಲಾ ಇದ್ದು ಆಡಳಿತ ಕಮಿಟಿ ಮಾಡಲಿಕ್ಕೆ ಬೇಕಾದಂಥ ವ್ಯವಸ್ಥೆ ಕೊಟ್ಟು ನಮ್ಮ ಈ ಮುಜರಾಯಿ ಇಲಾಖೆಗೆ ಬರುವಂಥ ರೀತಿಯಲ್ಲಿ ಮಾಡಿದ್ದೇವೆ. ಈ ಕೆಲವು ಸ್ಪಷ್ಟನೆ ಕೊಡುವ ಕೆಲಸವನ್ನು ಬಹಳ ಒಳ್ಳೆಯ ಶ್ರದ್ಧೆಯಿಂದ ನಾವು ಮಾಡುತ್ತಾ ಬರುವಾಗ, ಮಾರ್ಚಿ ನಂತರ ನಿಮ್ಮ ಕಳೆದ ಸಾರಿಯ ತಿದ್ದುಪಡಿಯ ಜಾರಿಗೆ ಬಂದ ನಂತರ ಅದರ ಪ್ರಕಾರ ಕೆಲಸ ಮಾಡುವಾಗ ತೋರಿದಂಥದ್ದು ಮತ್ತೆ ನಾನು ಆಗಲೇ ಹೇಳಿದ ಹಾಗೆ ಎರಡೂ ಸದನದಲ್ಲಿ ನಮಗೆ ಕೊಟ್ಟಂಥ ಸಲಹೆ ಗಳನ್ನು ಇದರಲ್ಲಿ ವೀಕರಿಸಿ ತಂದಿರುವಂಥದ್ದು ಅನುಷಂಗಿಕವಾಗಿ, ಪ್ರಾಸಂಗಿಕವಾಗಿ, ಬಂದಿರತಕ್ಕಂಥದ್ದನ್ನು ಇದರಲ್ಲಿ ಸೇರಿಸಿದ್ದೇವೆಯೇ ವಿನಾ ಹೊಸದು ಯಾವುದೂ ಮಾಡಿಲ್ಲ. ತಾವು ಹೇಳಿದಂಥ ಮಠ ಮತ್ತು ಮಠಕ್ಕೆ ಸೇರಿದ ದೇವಸ್ಥಾನಗಳನ್ನು ಮೂರೂ ಪಾರ್ಟಿಯ ಸರ್ಕಾರ ಇರುವಾಗ ಕರ್ನಾಟಕದಲ್ಲಿ ಒಪ್ಪಿಕೊಂಡಂಥ ವಿಷಯ. 14 ವರ್ಷದ ಹಿಂದೆ ನಿಮ್ಮ ಸರ್ಕಾರ ಇರುವಾಗ 1997ನೇ ಇಸ್ವಿಯಲ್ಲಿ ಹೀಗೆ ಇರಬೇಕೆಂದು ತೀರ್ಮಾನ ಮಾಡಿದಂಥದ್ದು. ಇವತ್ತು ನೀವು ಏನು ಮಾಡಿದಿರಿ ಎಂದು ನನ್ನನ್ನು ಟೀಕೆ ಮಾಡಿದರೆ ಏನು ಪ್ರಯೋಜನ?

ಶ್ರೀ ಸಿದ್ದರಾಮಯ್ಯ : ನಿಮ್ಮನ್ನು ಟೀಕೆ ಮಾಡುತ್ತಿಲ್ಲ.

ಡಾ: ವಿ.ಎಸ್. ಆಚಾರ್ಯ : Insidentally I happened to be a Member of the Joint Select Committee then.

ಶ್ರೀ ಸಿದ್ದರಾಮಯ್ಯ : No no, I have got high regards to you Mr. Acharyaiji. ಅದಲ್ಲ ನಾನು ಹೇಳುತ್ತಿರುವುದು. ತಾವು ಬಹಳ ಹೊತ್ತು ನಿಂತುಕೊಳ್ಳಬೇಡಿ ನೀವು ಕುಳಿತುಕೊಳ್ಳಿ ನಾನು ಹೇಳುತ್ತೇನೆ. ನಾನು ಏನು ಹೇಳುತ್ತೇನೆಂದರೆ, ಹಿಂದೆ ತೀರ್ಮಾನವಾಗಿ ಮಠಗಳಿಗೆ ಅವು attach ಆಗಿದ್ದರೆ ನಮ್ಮದೇನೂ ತಕರಾರಿಲ್ಲ, ಅವತ್ತಿಗೆ ಅಗಿರುವುದು. ಇವತ್ತು ಇತ್ತೀಚಿಗೆ ಕೊಟ್ಟಿರುವುದು ಉಡುಪಿ ದೇವಸ್ಥಾನ. ಗೋಕರ್ಣ ದೇವಸ್ಥಾನವನ್ನು ಇತ್ತೀಚಿಗೆ ಕೊಟ್ಟಿರುವುದು. ಅದು ಅವತ್ತಿನ ಕಾನೂನಿನಲ್ಲಿ ಇರಲಿಲ್ಲ. ಈಗ ಮಾಡಿರುವುದು. What made you to transfer Udupi Krishna temple to Udupi mutt?

ಡಾ: ವಿ.ಎಸ್. ಆಚಾರ್ಯ : No transfer. From the day of Madhvacharya everything. . . . .

ಶ್ರೀ ಸಿದ್ದರಾಮಯ್ಯ : Then why it was not included in Udupi mutt?

ಡಾ: ವಿ.ಎಸ್. ಆಚಾರ್ಯ : It never got alienated.

ಶ್ರೀ ಸಿದ್ದರಾಮಯ್ಯ : When such being the case, why it was not with mutt?

ಡಾ: ವಿ.ಎಸ್. ಆಚಾರ್ಯ : No. No. ನೀವು ಇಲ್ಲಿ why ಎಂದು ಕೇಳಿದರೆ? it was never.

ಶ್ರೀ ಸಿದ್ದರಾಮಯ್ಯ : ಇಲ್ಲಿಯವರೆಗೆ ಏಕೆ ಇರಲಿಲ್ಲ?

ಡಾ: ವಿ.ಎಸ್. ಆಚಾರ್ಯ : ನೋಡಿ ಮಧ್ವಾಚಾರ್ಯರರು.....

ಶ್ರೀ ಸಿದ್ದರಾಮಯ್ಯ : ಮಧ್ವಾಚಾರ್ಯರು ಅದು ಅವರಿಗೆ ಸೇರುವುದಾಗಿದ್ದರೆ, ಮಧ್ವಾಚಾರ್ಯರರು ಕಟ್ಟಿಸಿದಂಥ ದೇವಸ್ಥಾನ, ಆ ಮಠದವರೇ ಕಟ್ಟಿಸಿದಂಥ ದೇವಸ್ಥಾನ..

ಡಾ: ವಿ.ಎಸ್. ಆಚಾರ್ಯ : ನೋಡಿ ಕೃಷ್ಣ ದೇವರ ಮಠ ಎಂದು ನಾವು ಕರೆಯುವಂಥ ಕೃಷ್ಣ ದೇವಸ್ಥಾನಕ್ಕೆ ಅಲ್ಲಿ ಸ್ವಾಮೀಜಿಯವರು ಬಿಟ್ಟು ಬೇರೆಯವರು ಪೂಜೆ ಮಾಡಲಿಕ್ಕೇ ಇಲ್ಲ. ಕೃಷ್ಣ ದೇವರನ್ನು ಸ್ವಾಮೀಜಿಯವರೆ ಪ್ರತಿ ದಿವಸ ಬೆಳಗ್ಗೆಯಿಂದ ಸಂಜೆಯವರೆಗೆ ಒಂಬತ್ತು ಪೂಜೆ ಮಾಡ ಬೇಕಾದರೆ ಸ್ವಾಮೀಜಿಯವರೇ ಮಾಡುವಂಥದ್ದು, ಮಧ್ವಾಚಾರ್ಯರರು ಅದಕ್ಕೋಸ್ಕರ..

ಶ್ರೀ ಸಿದ್ದರಾಮಯ್ಯ : Madras High Court ನವರು ಏಕೆ ಒಪ್ಪಿಕೊಳ್ಳಲಿಲ್ಲ? Supreme Court ನವರು ಏಕೆ ಒಪ್ಪಿಕೊಳ್ಳಲಿಲ್ಲ?

ಡಾ: ವಿ.ಎಸ್. ಆಚಾರ್ಯ : ಯಾವ ಕೋರ್ಟು ಏನೇ ಹೇಳಿದರೂ ಒಂದು ದಿವಸವೂ ಕೃಷ್ಣ ದೇವಸ್ಥಾನ ಆಡಳಿತ ಅಷ್ಟ ಮಠದ ವಿನಾ ಹೊರಗೆ ಹೋಗಲಿಲ್ಲ. ಅಷ್ಟ ಮಠದ ಹೊರಗೆ ಇತ್ತು. 850 ವರ್ಷಗಳಿಂದ..

ಶ್ರೀ ಸಿದ್ದರಾಮಯ್ಯ : ನಾನು ಏನು ಹೇಳುತ್ತೇನೆಂದರೆ,.

ಡಾ: ವಿ.ಎಸ್. ಆಚಾರ್ಯ : No. ನೀವು ಹೇಳುವಂಥ reference ಬೇರೆಯಿದೆ.

ಶ್ರೀ ಸಿದ್ದರಾಮಯ್ಯ : When such is the case, there is a judgement. ಮುಂದಕ್ಕೆ ಹಾಕಿ ಸ್ವಾಮಿ ನಾನು judgement copy ಕಾಪಿ

ತಂದು ಕೊಡುತ್ತೇನೆ. 1961 ನೇ ಇಸ್ವಿಯಲ್ಲಿ ಆಗಿರತಕ್ಕಂಥ Supreme Court Judgement copy ತಂದು ಕೊಡುತ್ತೇನೆ.

ಡಾ: ವಿ.ಎಸ್. ಆಚಾರ್ಯ : ಈ amendment ಗೂ ಅದಕ್ಕೂ ಏನು ಸಂಬಂಧವಿದೆ?

ಶ್ರೀ ಸಿದ್ದರಾಮಯ್ಯ : Supreme Court ನಲ್ಲಿ 1961 ನೇ ಇಸ್ವಿಯಲ್ಲಿ ಒಂದು judgement ಆಗಿದೆ. I know the date also.

ಅಧ್ಯಕ್ಷರು : ಕೇಸ್ ಹೇಗೋ ಇದೆಯಲ್ಲ? ಆದರೆ, public temple ಆಗುತ್ತದೆ. ನೀವು ಏನೋ ಕೇಸ್ ಹಾಕಿದ್ದೇನೆಂದು ಹೇಳಿದ್ದೀರಲ್ಲಾ?

ಶ್ರೀ ಸಿದ್ದರಾಮಯ್ಯ : No, ಅವರೇ ಹೋಗಿದ್ದಾರೆ. ನಾವಲ್ಲ. ಉಡುಪಿ ಮಠದವರೇ ನಮಗೆ ಕೊಡಿ ಎಂದು ಹೋಗಿದ್ದಾರೆ. ಅವರು Supreme Court ನವರು ಏನು ಹೇಳಿದ್ದಾರೆಂದರೆ, ವ್ಯಾಜ್ಯ ಎಲ್ಲಾ ಆಗಿ, ಇದು ಮದ್ರಾಸ್‌ನಲ್ಲಿ Original suit ಹಾಕಿರುವುದು. Original suit ಹಾಕಿ, ಅದರ ಮೇಲೆ Madras High Court ಗೆ appeal ಹೋಗಿ, ಅವತ್ತು ಮದ್ರಾಸ್ ಹೈಕೋರ್ಟ್, ಇವತ್ತು Chennai High Court ಗೆ ಹೋಗಿ, Madras High Court ನಿಂದ Supreme Court ಗೆ appeal ಹೋಗಿ Supreme Court ultimately 1961 ರಲ್ಲಿ ಒಂದು judgement ಕೊಟ್ಟಿದೆ. ಆ judgement ಪ್ರಕಾರ, ಉಡುಪಿ ದೇವಸ್ಥಾನ ಉಡುಪಿ ಮಠಕ್ಕೆ ಸೇರಿದ್ದಲ್ಲ. ಇದು ಸಾರ್ವಜನಿಕರಿಗೆ ಇರತಕ್ಕಂಥ ದೇವಸ್ಥಾನ. ಮಠಕ್ಕೂ ಇದಕ್ಕೂ ಸಂಬಂಧವಿಲ್ಲ. ಮಠದವರು ಪೂಜೆ ಮಾಡಬಹುದು. It is a different aspect. But, it does not belong to mutt ಅಂತ they have made it specifically, very very clear. When such being the case, it is during your government one year back also you have transferred the temple from Endowment Dept. to Udupi Mutt. Why? What made you to transfer? That is No.1. Is it not against the judgement of the Supreme Court? It is against the judgement of the supreme court. ಅದಕ್ಕೆ ಕೋರ್ಟಿಗೆ ಹಾಕಿದ್ದಾರೆ. It is a different thing. ಕೋರ್ಟಿನಲ್ಲಿ ಕೇಸ್ ಇತ್ಯರ್ಥ ಜಲ್ದಿ ಆಗುವುದಿಲ್ಲವಲ್ಲ? ಅದನ್ನು ನಾನು ಏಕೆ ಹೇಳಿದೆ ಎಂದರೆ, ಇವರು ಏಕೆ ಇದನ್ನು ಮಾಡಿಬಿಟ್ಟು,

ಕನಿಷ್ಠ ಪಕ್ಷ ಅಲ್ಲಿ ಬರುವ ಆದಾಯ ಎಲ್ಲಿಗೆ ಹೋಗುತ್ತದೆ? ಆ ಆದಾಯ ಯಾರಿಗೆ? ಎಷ್ಟು ಬರಬಹುದು?

ಡಾ: ವಿ.ಎಸ್. ಆಚಾರ್ಯ : ನಿರ್ವಹಣೆ ಮಾಡುವುದು ಬೇಡವೆ?

ಶ್ರೀ ಸಿದ್ದರಾಮಯ್ಯ : ನನ್ನ ಪ್ರಕಾರ ಒಂದು ವರ್ಷಕ್ಕೆ ಮೂರು ಕೋಟಿ ರೂಪಾಯಿ ಬರುತ್ತದೆ. ಈ ದುಡ್ಡು ಯಾರದು, ಯಾರು ಕೊಡುವುದು? ಅದು ಜನರು ದೇವಸ್ಥಾನದ ಹುಂಡಿಗೆ ಹಾಕುವಂತಹ ಹಣವಾಗಿರುತ್ತದೆ. ಮಂಗಳಾರತಿ ತಟ್ಟೆಗೆ ಹಾಕತಕ್ಕಂಥದ್ದನ್ನು ಪೂಜಾರಿಗಳು ತೆಗೆದುಕೊಳ್ಳುತ್ತಾರೆ. ಎಂಡೋಮೆಂಟ್‌ನಲ್ಲಿದ್ದರೆ ಏನಾಗುತ್ತದೆಂದರೆ, ಅಲ್ಲಿ ದಲಿತರು, ಹಿಂದುಳಿದ ವರ್ಗದವರು, ಅಲ್ಪಸಂಖ್ಯಾತರನ್ನೂ ಸಹ ಪೂಜಾರಿಗಳನ್ನಾಗಿ ಮಾಡಬೇಕಾಗುತ್ತದೆ. ಎಲ್ಲರನ್ನು ಮಾಡಿ, ಏಕೆಂದರೆ, ಹಿಂದೂಗಳೆಂದರೆ ಎಲ್ಲರೂ ಒಂದೇ ಅಲ್ಲವೆ? ಇವರೇನು ಬೇರೆನಾ? ಅವರುಗಳನ್ನು ಏಕೆ ಮಾಡುವುದಿಲ್ಲ? ಒಂದು ಪರ್ಟಿಕ್ಯುಲರ್‌ನವರೆ ಮಾಡಬೇಕೆಂಬುದು ಪ್ರಿವಿಲೇಜಾಗಿದೆಯೇ? Let all share this.

ಡಾ: ಹೆಚ್.ಸಿ.ಮಹದೇವಪ್ಪ : ಬಿಲ್‌ನಲ್ಲಿ ಇದನ್ನು incorporate ಮಾಡಬೇಕಾಗಿತ್ತು. ಇದನ್ನು ಒಪ್ಪಿಕೊಳ್ಳುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದನ್ನು ಇಷ್ಟೊಂದು ಕಟ್ಟುಪಾಡಿನ ಹೊರತಾಗಿ ಕೃಷ್ಣ ತಪ್ಪಿಸಿಕೊಂಡು ಕಿಂಡಿ ಮೂಲಕ ದರ್ಶನ ಕೊಡುತ್ತಿದ್ದಾರೆಂದರೆ, ಇದನ್ನೆಲ್ಲ ಬಿಟ್ಟು ಎಲ್ಲರನ್ನು ಸೇರಿಸಿಕೊಂಡು ಮಾಡಿ ಎಂಬುದು ಕೃಷ್ಣನ ಸಂದೇಶವಾಗಿದೆ. ಇದನ್ನು ಅರ್ಥ ಮಾಡಿಕೊಳ್ಳುವುದನ್ನು ಬಿಟ್ಟು ಇನ್ನೂ ಕಟ್ಟುಪಾಡುಗಳನ್ನು ಹಾಕುತ್ತಿದ್ದೀರಿ.

ಡಾ: ವಿ.ಎಸ್. ಆಚಾರ್ಯ : ಧಾರ್ಮಿಕ ದತ್ತಿ ಕಾಯಿದೆಗೂ ಅದಕ್ಕೂ ಸಂಬಂಧ ಇಲ್ಲ.

ಶ್ರೀ ಸಿದ್ದರಾಮಯ್ಯ : ಯಾರಿಗೆ ದೇವಸ್ಥಾನದ ಒಳಗಡೆ ಬಿಡಲಿಲ್ಲವೋ ಆತನಿಗೆ ಉಡುಪಿ ದೇವಸ್ಥಾನದಲ್ಲಿರುವ ಕೃಷ್ಣ ದರ್ಶನ ಕೊಟ್ಟಿದ್ದಾನೆ. ದೇವಸ್ಥಾನದ ಒಳಗಡೆ ಇದ್ದವರಿಗೆ ದರ್ಶನ ಕೊಡಲಿಲ್ಲ. This is the history. ಕನಕದಾಸ ಅಲ್ಲಿಗೆ ಹೋದಾಗ ಉಡುಪಿ ಕೃಷ್ಣ ಕಿಂಡಿಯ ಮೂಲಕ ದರ್ಶನ ಕೊಟ್ಟಿದ್ದಾನೆ. ಮಾನ್ಯ ಸಚಿವರೆ, ನನ್ನ ಮಾತನ್ನು ಕೇಳಿ. ಇಲ್ಲದಿದ್ದರೆ ನಾವು ವಿರೋಧ ಮಾಡಬೇಕಾಗುತ್ತದೆ. I am opposing this. This has to be discussed at length. ನಾವು ಪ್ರಿಪೇರ್ ಆಗಿ ಬರಬೇಕು. ಇದಕ್ಕೆ

ಸಂಬಂಧಪಟ್ಟಂತಹ ಜಡ್ಜ್‌ಮೆಂಟ್ ತರುತ್ತೇನೆ. ಆದ್ದರಿಂದ, ಇದನ್ನು ಮುಂದಕ್ಕೆ ಹಾಕಿ.

ಡಾ: ವಿ.ಎಸ್. ಆಚಾರ್ಯ : ಆ ಜಡ್ಜ್‌ಮೆಂಟ್‌ಗೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಸಿದ್ದರಾಮಯ್ಯ : ಸಂಬಂಧ ಇದೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಚಿವರೆ, ತಾವು ತಂದಿರುವ ಬಿಲ್ ನನಗಂತೂ ಅರ್ಥವಾಗಿಲ್ಲ. ಅರ್ಥ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಆದರೂ ಕೂಡ ಅರ್ಥವಾಗುತ್ತಿಲ್ಲ. ತಾವು ಯಾವ ಉದ್ದೇಶದಿಂದ ತರಲಾಗಿದೆ ಎಂಬ ಬಗ್ಗೆ ಏನು ಹೇಳಿದ್ದೀರೆಂದರೆ, "To specify that the provisions of the Act shall apply to all religious institutions or charitable endowments notified under Section 23." I don't know actually what is Section 23. "To provide that Section 53 and chapter VIII apply to all religious institutions or charitable endowments other than notified religious institutions or charitable endowments under Section 23. To omit certain overlapping provisions of the Act." ಯಾವುದನ್ನು overlap ಮಾಡಲಾಗುತ್ತಿದೆಯೋ ಅದನ್ನು explain ಮಾಡುವುದಿಲ್ಲ. ಮುಖ್ಯವಾಗಿ financial ಗೆ ಸಂಬಂಧಪಟ್ಟಂತೆ ಏನು ಮಾಡುತ್ತಿದ್ದೇರೆಂದರೆ, "To enable to incur the amount collected under Common Pool Fund for the purpose of the object of the Act and to grant aid to the establishment and development of Goshala." ಇದೆಲ್ಲವನ್ನು ರಿಲಿಜಿಯಸ್‌ನಲ್ಲಿಯೇ ತರುವುದಾದರೆ, I want to understand the Act.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಜಯಚಂದ್ರರವರೆ, ತಾವು ಕೂಡ ಪಶುಸಂಗೋಪನೆ ಸಚಿವರಾಗಿ ಕೆಲಸ ಮಾಡಿದ್ದೀರಿ. ಇವತ್ತಿನ ದಿವಸ ಭಾರತ ಸರ್ಕಾರ ಗೋಸೇವಾ ಆಯೋಗವೆಂದು ಸೆಂಟ್ರಲ್ ಆಕ್ಟ್ ಮಾಡಿ ರಾಜ್ಯ ಸರ್ಕಾರಗಳು ಎಲ್ಲೆಲ್ಲಿ ಸಾಧ್ಯವಿದೆಯೋ ಅಲ್ಲಿ ಗೋಶಾಲೆಗಳನ್ನು ಮಾಡುವುದಕ್ಕೆ ಬೇಕಾದಂಥ ಪ್ರಾವಿಜನ್ ಅನ್ನು ಮಾಡಿದ್ದಾರೆ. 25 ಲಕ್ಷ ರೂಪಾಯಿಗಿಂತ ಹೆಚ್ಚಿರುವ ಮೇಜರ್ ಟೆಂಪಲ್‌ನಲ್ಲಿ ಅವರ ಲಾಭಾಂಶದ ಒಂದು ಸಣ್ಣ ಪ್ರಮಾಣದಲ್ಲಿ ಅಂದರೆ, ಲಾಭದಲ್ಲಿನ 5% ಅನ್ನು Common Pool Fund ಎಂದು ಮಾಡಿರತಕ್ಕಂಥದರಲ್ಲಿ (a) ಇಂದ (L) ವರೆಗೆ ಇತ್ತು.

ಎರಡು ಸೆಕ್ಷನ್ ಅನ್ನು ಅಂದರೆ ಇದರ ನಂತರ (m) ಮತ್ತು (n) ಎಂದು ಎರಡು ಸೆಕ್ಷನ್‌ಗಳನ್ನು ಹಾಕಿ ಗೋಶಾಲೆಗಳಿಗೂ ಕೊಡುವುದಿದ್ದರೆ ಸ್ವಲ್ಪ ಕೊಡಬಹುದೆಂದು ಹೇಳಿದ್ದೇವೆ. ಇದರಲ್ಲಿ ಏನು ತಪ್ಪಾಗಿದೆ? ಗೋಶಾಲೆಗಳಿಗೆ ಕೊಡಿ ಎಂಬ ಸಣ್ಣ ತಿದ್ದುಪಡಿ ಅಷ್ಟೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಇದನ್ನು ನೆನ್ನೆ ದಿವಸ introduce ಮಾಡಿ ಇದರ ಪ್ರತಿಗಳನ್ನು ನಮಗೆ ಕೊಟ್ಟಿದ್ದರೆ ನಾವು ನೋಡಿಕೊಂಡು ಬರುತ್ತಿದ್ದೆವು. Actually, ಇದರಲ್ಲಿ ನಮಗೇನೂ ಅರ್ಥವಾಗುತ್ತಿಲ್ಲ. ಇದರಲ್ಲಿ "To enhance the term of the nominated members of Rajya Dharmika Parishat" ಎಂದು ಇದೆ. ಇದು ಏನೆಂಬುದು ನನಗೆ ಅರ್ಥವಾಗಲಿಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಓದಿಕೊಂಡು ಬಂದು ಸ್ವಲ್ಪ ಅರ್ಥ ಪೂರ್ಣವಾಗಿ ಚರ್ಚೆ ಮಾಡೋಣ. Let there be a meaningful discussion.

ಡಾ: ವಿ.ಎಸ್. ಆಚಾರ್ಯ : ಇದು ಈಗಲೇ ಆಗಬೇಕು.

ಅಧ್ಯಕ್ಷರು : ಈಗಾಗಲೇ ವಿದಾನ ಪರಿಷತ್‌ನಲ್ಲಿ ಅಪ್ರೂವಲ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಯಾವ ಪಾಯಿಂಟ್ ನಿಮಗೆ ತೊಂದರೆ ಕೊಡುತ್ತಿದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಅಲ್ಲಿ ಪಾಸ್ ಆಗಿ ಬಂದಿದೆ ಎಂದು ನಾವು ಒಪ್ಪಿಕೊಳ್ಳಬೇಕೆಂದು ಏನಿಲ್ಲ. ಅದನ್ನು ಇಲ್ಲಿ ತಡೆಹಿಡಿಯ ಬಹುದು. ಅಲ್ಲಿ ಮೊದಲೇ ಮಂಡನೆ ಮಾಡಿದ್ದಾರೆ. ಆದ್ದರಿಂದ, ಪಾಸ್ ಮಾಡಿದ್ದಾರೆ. ಇಲ್ಲಿ ನಾವು ವಿರೋಧ ಮಾಡಬಾರದೆಂದು ಮತ್ತು ಒಪ್ಪಿಕೊಳ್ಳಬೇಕೆಂದು ಏನಿಲ್ಲ. It is not binding on us. ನಾವು ಇಲ್ಲಿಂದ ಪಾಸ್ ಮಾಡಿರುವುದನ್ನೆ ಅವರು ಇಲ್ಲಿಗೆ ಮತ್ತೆ ವಾಪಸ್ಸು ಕಳುಹಿಸುತ್ತಾರೆ. ಆದ್ದರಿಂದ, ನಾನು ಹೇಳುವುದೇನೆಂದರೆ, ಉಡುಪಿಯಲ್ಲಿರುವ ಕೃಷ್ಣ ದೇವಸ್ಥಾನ ಶೂದ್ರರ ದೇವಸ್ಥಾನವಾಗಿದೆ. ನಾಳೆ ದಿವಸ ಯಾರೂ ಒಳಗಡೆ ಬರಬಾರದೆಂದು ಮಠದವರು ಹೇಳಿದರೆ ಏನು ಮಾಡಬೇಕು?

ಡಾ: ವಿ.ಎಸ್. ಆಚಾರ್ಯ : ಆ ರೀತಿಯಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಬರಬೇಡಿ ಎಂದು ಹೇಳಿದರೆ ಏನು ಮಾಡುತ್ತೀರಿ?

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಆ ರೀತಿಯಾಗುವುದಿಲ್ಲ.

ಶ್ರೀ ಸಿದ್ದರಾಮಯ್ಯ : ಆದ್ದರಿಂದ, ಇದರ ಬಗ್ಗೆ ಚರ್ಚೆ ಮಾಡೋಣ. Let there be discussion on this. It is a very important temple. Krishna himself is Shudra.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ನಾನು ಮನವಿ ಮಾಡುವುದೇನೆಂದರೆ, ಇದರಲ್ಲಿ ಯಾವುದೂ ಹೊಸ ಅಂಶಗಳು ಇಲ್ಲ.

ಶ್ರೀ ಸಿದ್ದರಾಮಯ್ಯ : ಟ್ರಾನ್ಸ್‌ಫರ್ ಮಾಡಿರುವ ಆದೇಶವನ್ನು ಕೊಡಿ. ಅದರಲ್ಲಿ ಏನೇನು ಕಂಡಿಷನ್ ಹಾಕಿದ್ದೀರೆಂದು ನೋಡೋಣ.

ಡಾ: ವಿ.ಎಸ್. ಆಚಾರ್ಯ : ಯಾವುದು?

ಶ್ರೀ ಸಿದ್ದರಾಮಯ್ಯ : ಉಡುಪಿ ದೇವಸ್ಥಾನಕ್ಕೆ ಸಂಬಂಧಪಟ್ಟಿರುವುದು ಕೊಡಿ.

ಡಾ: ವಿ.ಎಸ್. ಆಚಾರ್ಯ : ಕೊಟ್ಟಿದ್ದೇವೆ.

ಶ್ರೀ ಸಿದ್ದರಾಮಯ್ಯ : ಉಡುಪಿ ದೇವಸ್ಥಾನದ್ದು ಕೊಡಿ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಮಠದ ಆವರಣದಲ್ಲಿರುವಂಥ ದೇವಸ್ಥಾನಗಳಿಗೆ exemption ಎಂದು ತಾವೇನು ರೈಸ್ ಮಾಡಿದ್ದೀರಿ, ಅದು 1997ರ original Act ನಲ್ಲಿಯೇ ಇದೆ.

ಶ್ರೀ ಸಿದ್ದರಾಮಯ್ಯ : ಉಡುಪಿ ದೇವಸ್ಥಾನ ಉಡುಪಿ ಮಠಕ್ಕೆ ಕೊಡಬೇಕೆಂದು ಇದೆಯೇ?

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಕೊಡಬೇಕೆಂದು ಅಲ್ಲ.

ಶ್ರೀ ಸಿದ್ದರಾಮಯ್ಯ : ಅದೇ ಮತ್ತೆ ಇಲ್ಲಿ ಆಗಿರುವುದು. ಉಡುಪಿ ಮಠಕ್ಕೆ ಕೊಟ್ಟಿದ್ದಾರೆಂಬುದು ನನ್ನ objection ಆಗಿದೆ.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ: ಆ ರೀತಿ ಇಲ್ಲ.

ಅಧ್ಯಕ್ಷರು : ಆ ರೀತಿ ಇಲ್ಲ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಆ ರೀತಿ ಇಲ್ಲ. 1997ರ Original Act ನಲ್ಲಿಯೇ ಇದೆ.

(ಗೊಂದಲ)

ಅಧ್ಯಕ್ಷರು : ಅಲ್ಲಿ ಒಪ್ಪಿಗೆ ಆಗಿ ಬಂದಿದೆ.

ಶ್ರೀ ಸಿದ್ದರಾಮಯ್ಯ : ಮುಂದಕ್ಕೆ ಹಾಕಿ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಎಲ್ಲದಕ್ಕೂ ಉತ್ತರ ಕೊಟ್ಟಿದ್ದಾರೆ.

ಶ್ರೀ ಸಿದ್ದರಾಮಯ್ಯ : The heaven will not fall. ಇದನ್ನು ಮುಂದಕ್ಕೆ ಹಾಕಿದರೆ ಆಕಾಶ ಏನು ಬಿದ್ದು ಹೋಗುವುದಿಲ್ಲ.

ಡಾ: ವಿ.ಎಸ್. ಆಚಾರ್ಯ : ಸಣ್ಣ ಪುಟ್ಟ ಸ್ಪಷ್ಟೀಕರಣ ಇರತಕ್ಕಂಥ ಒಂದು ಅಮೆಂಡ್‌ಮೆಂಟ್ ಆಗಿದೆ. ಇದು ಇಲ್ಲದಿದ್ದರೆ ನಮಗೆ ದೈನಂದಿನ ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತದೆ.

ಶ್ರೀ ಸಿದ್ದರಾಮಯ್ಯ : ಏನೂ ತೊಂದರೆಯಾಗುವುದಿಲ್ಲ. ಇಷ್ಟು ದಿವಸ ಮಾಡಿಕೊಂಡು ಬಂದಿಲ್ಲವೋ? ನಾವು ಇದನ್ನು ತೀವ್ರವಾಗಿ ವಿರೋಧಿಸುತ್ತೇವೆ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಪ್ರತಿಪಕ್ಷ ನಾಯಕರು ಒಂದು ನಿಮಿಷ ನಾನು ಹೇಳುವುದನ್ನು ಕೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ನಿಮ್ಮಲ್ಲಿ ನನ್ನ ವಿನಂತಿ ಏನೆಂದರೆ, ಇದರಲ್ಲಿ ಇರತಕ್ಕಂಥದ್ದರಲ್ಲಿ ಯಾವುದರ ಬಗ್ಗೆ ವಿವರಣೆ ಕೇಳಿದರೂ ಅದಕ್ಕೆ ನಾನು ವಿವರಣೆ ಕೊಡುತ್ತೇನೆ. ಇದರಲ್ಲಿ ಹೊಸ ಅಂಶ ಯಾವುದೂ ಸಹ ಸೇರಿಲ್ಲ. ಮಾರ್ಚ್ ತಿಂಗಳಲ್ಲಿ ಮೇಜರ್ ಆಗಿ ಒಂದು ತಿದ್ದುಪಡಿ ಬಂದಿದ್ದಕ್ಕೆ ಆ ಸಮಯದಲ್ಲಿ ಕೆಲವು ಸ್ಪಷ್ಟೀಕರಣ ವನ್ನು ನೀವೆಲ್ಲ ಕೇಳಿದ್ದಕ್ಕೆ ಮುಂದೆ ಇದರ ಬಗ್ಗೆ ತಿದ್ದುಪಡಿ ತರುತ್ತೇನೆಂದು ಹೇಳಿದ ಪ್ರಕಾರ ಈಗ ತಿದ್ದುಪಡಿ ತಂದಿದ್ದೇನೆ. ಎರಡೂ ಸದನದ ಸದಸ್ಯರು ಹೇಳಿದ ಪ್ರಕಾರ ತಂದಿದ್ದೇವೆ.

ಶ್ರೀ ಸಿದ್ದರಾಮಯ್ಯ : ನನ್ನದು ಎರಡು objections ಇವೆ. ಮೊದಲನೆಯದು ಆ ಗೋಶಾಲೆ ಮಾಡತಕ್ಕಂಥದು. ಇನ್ನೊಂದು ಏನೆಂದರೆ,...

ಡಾ: ವಿ.ಎಸ್. ಆಚಾರ್ಯ : ಗೋಶಾಲೆ ಮಾಡುವುದಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಗೋಶಾಲೆಗೆ ದೇವಸ್ಥಾನದಿಂದ ದುಡ್ಡು ಕೊಡುವುದಲ್ಲವೆ? ನಾವು ಇದನ್ನು ಪೂರ್ಣವಾಗಿ ಓದುವುದಕ್ಕೆ ಆಗಿಲ್ಲ.

(ಗೊಂದಲ)

ಅಧ್ಯಕ್ಷರು : Almost ಎಲ್ಲವನ್ನು ನಾನು ನೋಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾವು ಓದಬೇಕೋ ಬೇಡವೋ? ಈ ತರಹ ನಮಗೆ ಬಲತ್ಕಾರ ಮಾಡಿ ಒಪ್ಪಿಸುವುದು ಸರಿಯಲ್ಲ.

(ಗೊಂದಲ)

ಡಾ: ವಿ.ಎಸ್. ಆಚಾರ್ಯ : ಸಣ್ಣಪುಟ್ಟ ಅಮೆಂಡ್‌ಮೆಂಟ್ಸ್ ಇದೆ.

ಶ್ರೀ ಸಿದ್ದರಾಮಯ್ಯ : ಸಣ್ಣದಾಗಲಿ ಅಥವಾ ದೊಡ್ಡದಾಗಲಿ, there are so many amendments.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ದೇವಸ್ಥಾನ ಆದಾಯದ 1% ಅನ್ನು Common Pool Fund ಮುಖಾಂತರ ವಿವಿಧ ಚಟುವಟಿಕೆಗಳಿಗೆ ದುಡ್ಡು ಕೊಡುವಂಥದ್ದು. ಇದರಲ್ಲಿ ಗೋಶಾಲೆ ಕೂಡ ಒಂದಾಗಿದೆ.

(ಗೊಂದಲ)

ಡಾ: ವಿ.ಎಸ್. ಆಚಾರ್ಯ : ಮಾನ್ಯ ಸಭಾಧ್ಯಕ್ಷರೆ, ಈಗಾಗಲೇ ತಂದಿರುವಂಥ ಕಾನೂನಿಗೆ ಕೊಟ್ಟಿರುವಂಥ ಕೆಲವು ಸ್ಪಷ್ಟೀಕರಣಗಳು ಇವೆ. ಇದರಲ್ಲಿ ಯಾವುದೇ ಹೊಸ ವಿಷಯಗಳು ಇಲ್ಲ. ಆದ್ದರಿಂದ, ಸದನದ ಒಪ್ಪಿಗೆಗೋಸ್ಕರ ಇದನ್ನು ಪರ್ಯಾಲೋಚಿಸಬೇಕೆಂದು ಮಂಡಿಸುತ್ತಿದ್ದೇನೆ. ದಯವಿಟ್ಟು ಇದಕ್ಕೆ ಅನಮತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿದ್ದರಾಮ್ಯಯ : ಮಾನ್ಯ ಅಧ್ಯಕ್ಷರೆ, ನಾವು ನಿನ್ನೆಯಿಂದ ಇವತ್ತಿನವರೆಗೆ ಎಷ್ಟು ಬಿಲ್ ಪಾಸ್ ಮಾಡಿಕೊಟ್ಟಿದ್ದೇವೆ ನೀವೆ ಹೇಳಿ? ನಾವು co-operate ಮಾಡಿಲ್ಲವೆ? ನಮ್ಮದೊಂದು request ಅನ್ನು consider ಮಾಡುವುದಿಲ್ಲವೆಂದರೆ ಹೇಗೆ? We have co-operated to pass so many Bills today. ಚರ್ಚೆ ಮಾಡೋಣ. ನಾವೇನು ವಿರೋಧ ಮಾಡುವುದಿಲ್ಲ. ಇದರ ಬಗ್ಗೆ ನಾವು ಸ್ವಲ್ಪ ತಿಳಿದುಕೊಂಡು ಚರ್ಚೆ ಮಾಡೋಣವೆಂದು ಹೇಳುತ್ತಿದ್ದೇವೆ. ಇದನ್ನು ನಾವು ಓದಿಕೊಂಡು ಬರುತ್ತೇವೆ. ಆನಂತರ ಚರ್ಚೆ ಮಾಡೋಣ. ಜನವರಿ ತಿಂಗಳಲ್ಲಿ Governor's Address ಇರುತ್ತದೆ. ಆಗ ಇದರ ಬಗ್ಗೆ ಚರ್ಚೆ ಮಾಡೊಣ. ಇನ್ನು ಒಂದು ತಿಂಗಳಲ್ಲಿ ಆಕಾಶ ಬಿದ್ದು ಹೋಗುವುದಿಲ್ಲ. ಇಲ್ಲದಿದ್ದರೆ, ಸೋಮವಾರ ಅಥವಾ ಮಂಗಳವಾರ ಅಧಿವೇಶನ ಕರೆಯಿರಿ, ಚರ್ಚೆ ಮಾಡೋಣ. ಬಿಲ್ ಈಗ ನಮಗೆ ಸಿಕ್ಕಿದೆ.

ಶ್ರೀ ಬಸವರಾಜ ಎಸ್.ಬೊಮ್ಮಾಯಿ : ಎರಡು ಸಣ್ಣ clause ಗಳನ್ನು add ಮಾಡುವಂಥ ಒಂದು ಸಣ್ಣ ತಿದ್ದುಪಡಿ ಇದೆಯಷ್ಟೆ.

ಶ್ರೀ ಸಿದ್ದರಾಮಯ್ಯ : ಇಲ್ಲಿ ಈಗ introduce ಮಾಡಿದ್ದಾರೆ. ಅಲ್ಲಿ introduce ಮಾಡಲಾಗಿದೆ. ಆದರೆ, ಈ ಹೌಸ್‌ನಲ್ಲಿ ಈಗ introduce ಮಾಡಿದ್ದಾರೆ. ನಾನು ಇದನ್ನು ಒಪ್ಪುವುದಿಲ್ಲ. ಅಲ್ಲಿ introduce ಮಾಡಿ ಒಪ್ಪಿದ ಮೇಲೆ ಇಲ್ಲಿ ಪರ್ಯಾಲೋಚನೆ ಮಾಡುವಂತಿಲ್ಲವೆಂದು ಯಾವ ರೂಲ್ ಹೇಳುತ್ತದೆ? ಆ ರೀತಿ ಏನಾದರೂ ಇದೆಯೇ?

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ : ಎರಡು small clause ಗಳನ್ನು ಅನ್ನು add ಮಾಡುವುದನ್ನು ಬಿಟ್ಟರೆ ಮೇಜರ್ ಅಮೆಂಡ್‌ಮೆಂಟ್ ಇದರಲ್ಲಿ ಇಲ್ಲ. ಎರಡನೆಯದು ಏನೆಂದರೆ, ಅವರು ಆಂತಕ ವ್ಯಕ್ತಪಡಿಸಿರುವ ವಿಚಾರ 1997ರ ಮೂಲ ಆಕ್ಟ್‌ನಲ್ಲಿಯೇ ಇದೆ. ಆದ್ದರಿಂದ, ಇದರಲ್ಲಿ ಹೊಸದೇನು ತಿದ್ದುಪಡಿ ಏನು ಇಲ್ಲ. ಈಗಾಗಲೇ ಕೌನ್ಸಿಲ್‌ನಲ್ಲಿ ಪರ್ಯಾಲೋಚನೆ ಮಾಡಿ, ಚರ್ಚೆಯಾಗಿ ಪಾಸ್ ಆಗಿದೆ. ಇದರಲ್ಲಿ ಬಹಳ ದೊಡ್ಡ ಅಮೆಂಡ್‌ಮೆಂಟ್ ಇಲ್ಲ. ಆದ್ದರಿಂದ, ದಯವಿಟ್ಟು ಪರ್ಯಾಲೋಚಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ದಯವಿಟ್ಟು ಈ ಬಗ್ಗೆ clarify ಮಾಡಿಬಿಡಿ. 'To omit certain overlapping provisions in the Act.' ಅದೇನೆಂದು ಹೇಳಿ. ಅದರ ಬಗ್ಗೆ ನಿಮಗೆ ಗೊತ್ತಿಲ್ಲ. ಸುಮ್ಮನೆ ನೀವು advocate ಮಾಡುತ್ತೀರಿ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಇಲ್ಲ, ನಾನು ಹೇಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ : ನಾನು ಏತಕ್ಕಾಗಿ ಹೇಳುತ್ತೇನೆ ಗೊತ್ತೆ? ನೀವು 19 amendment ಗಳನ್ನು ತಂದಿದ್ದೀರಿ. ಅಲ್ಲಿ ನನ್ನ ಯೋಚನೆ ಏನೆಂದರೆ, ನಮ್ಮ ತಾವರೆಕೆರೆಯಲ್ಲಿ ಮುಜರಾಯಿಗೆ ಸೇರಿರುವಂತಹ ಒಂದು ದೇವಾಸ್ಥಾನವಿದೆ. ಅಲ್ಲಿ ಇವತ್ತಿನವರೆಗೂ ಕೂಡ ಕಮಿಟಿ ಇಲ್ಲ. That is why I want to really understand. ಏನು ಪ್ರಾಬ್ಲಮ್ ಇದೆ ಎಂದು ಅರ್ಥವಾಗಬೇಕು. ಇದನ್ನು ಇವತ್ತು introduce ಮಾಡಿದ್ದೀರಿ.

ಶ್ರೀ ಬಸವರಾಜ ಬೊಮ್ಮಾಯಿ : ದೇವಾಲಯಗಳಿಗೆ ಕಮಿಟಿ ಮಾಡದೆ ಇದ್ದರೆ ಕೆಲಸಗಳನ್ನು ಮಾಡುವುದಕ್ಕಾಗುತ್ತಿಲ್ಲ. ಈ amendment ಆದರೆ

ಅನುಕೂಲವಾಗುತ್ತದೆ ಎನ್ನುವಂತಹ ದೃಷ್ಟಿಯಿಂದಲೇ ಈ ಬಿಲ್ ಅನ್ನು ತಂದಿರುವುದು.

ಶ್ರೀ ಬಿ.ಎನ್. ಬಚ್ಚೇಗೌಡ : ತಾವು ಹೇಳುವಂತಹ ದೇವಸ್ಥಾನವು 9 ಜನರ ಕಮಿಟಿ ಮಾಡುವಂತಹದ್ದು ಇದೆ ಎಂದು 3ನೇ ವಿಭಾಗದಲ್ಲಿ ಹೇಳಿದ್ದಾರೆ. ಮೊದಲನೆ ವಿಭಾಗ, ಎರಡನೇ ವಿಭಾಗ, ಮೂರನೇ ವಿಭಾಗದಲ್ಲಿ ತಾವು ಬೇಕಾದರೆ ಕಮಿಟಿಯನ್ನು ಮಾಡಿಕೊಳ್ಳಬಹುದು. ಅದರಲ್ಲಿ ವಿರುದ್ಧ ಏನಾಗುವುದಿಲ್ಲ. ತಾವು ಕಮಿಟಿಯನ್ನು ಮಾಡಿಕೊಳ್ಳಬಹುದು. ತಾವು ಕೇಳಿದ್ದಕ್ಕಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ಅದು 2003ರಲ್ಲಿ ಬಂತು, ಇದುವರೆಗೂ ರೂಲ್ಸ್ ಆಗಿರುವುದಿಲ್ಲ. ಹೌದಾ?

ಶ್ರೀ ವಿ.ಎಸ್. ಆಚಾರ್ಯ : ನೀವು ಹೇಳಿದಂತಹ ರಾಜ್ಯದ ಧಾರ್ಮಿಕ ಪರಿಷತ್ ಮತ್ತು ಜಿಲ್ಲಾ ಧಾರ್ಮಿಕ ಪರಿಷತ್ ಮಾರ್ಚಿ ತಿಂಗಳಲ್ಲಿ amendment ಆಗಿ ಕಾನೂನಿನ ಭಾಗವಾಗಿದೆ. ಇಪತ್ತು overlapping ಆಗಿರುವುದು ಯಾವುದೆಂದರೆ, ನೀವು ಅನುಬಂಧ Original Act ನಲ್ಲಿ ನೋಡಿ, ಅದರಲ್ಲಿ "ವಂಶಪಾರಂಪರ್ಯ ಪದಧಾರಕ" ಮತ್ತು "ವಂಶಪಾರಂಪರ್ಯ ನ್ಯಾಸಧಾರಿ" ಎಂದರೆ ಏನು ಅಂತ ಇದೆ. ಅದು overlapping ಆಗಿದೆ. ಅದನ್ನು streamline ಮಾಡಿ ಈಗ ಅದನ್ನು 2ನೇ ಪುಟದಲ್ಲಿ.....

ಶ್ರೀ ಟಿ.ಬಿ. ಜಯಚಂದ್ರ : ಒಟ್ಟು 19 amendments ಇದೆ.

ಡಾ: ವಿ.ಎಸ್. ಆಚಾರ್ಯ ಅದು amendment ಅಲ್ಲ ಸರ್. It is only clarifications, streamlining.

ಅಧ್ಯಕ್ಷರು : ಮಾನ್ಯ ಸಚಿವರು, small ಎಂದು ಹೇಳುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಅಂತಹ incident ಅಲ್ಲ. ಬೇರೆ ಬೇರೆ ರೂಲ್‌ಗಳು ಇವೆ. ಬೇರೆ ಬೇರೆ sections ಗೆ ತಾವು amendments ತಂದಿದ್ದೀರಿ.

ಡಾ: ವಿ.ಎಸ್. ಆಚಾರ್ಯ : ಕೆಲವು ಅಸ್ಪಷ್ಟತೆಗಳು ಇದ್ದುದ್ದಕ್ಕೆ ಸ್ಪಷ್ಟತೆಯನ್ನು ತಂದಿರುವುದನ್ನು ಬಿಟ್ಟರೆ ಏನೂ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಅದು ಏನು ಎಂದು ಹೇಳಬೇಕಲ್ಲ?

ಡಾ: ವಿ.ಎಸ್. ಆಚಾರ್ಯ : ಉದಾಹರಣೆಗೆ ಹೇಳುವುದಾದರೆ,.....

ಶ್ರೀ ಸಿದ್ದರಾಮಯ್ಯ : ಅಸ್ಪಷ್ಟತೆಗಳು ಏನು, ಸ್ಪಷ್ಟತೆಗಳು ಏನು ಅದರ ಬಗ್ಗೆ ನಾವು ಓದಿಕೊಳ್ಳಬೇಕೆಂದು ಕೇಳುತ್ತಿದ್ದೇವೆ.

ಡಾ: ವಿ.ಎಸ್. ಆಚಾರ್ಯ : ನಾನು ಒಂದು ಈಗ clarification ಮಾಡುತ್ತೇನೆ. ಅನುಬಂಧ–1 ಅನ್ನು ತೆಗೆದುನೋಡಿ. ಪೇಜ್ ನಂ:11.

ಶ್ರೀ ಸಿದ್ದರಾಮಯ್ಯ : ಟೈಮ್ ಆಗುತ್ತದೆ. ಈ ಬಿಲ್ ಅನ್ನು ಮುಂದೆ ಪಾಸು ಮಾಡೋಣ. ಡಾ: ಆಚಾರ್ಯರವರೆ, Please co-operate.

ಡಾ: ವಿ.ಎಸ್. ಆಚಾರ್ಯ : Department ಗಳಲ್ಲಿ ಕೆಲಸವನ್ನು ಮಾಡುವುದಕ್ಕಾಗುತ್ತಿಲ್ಲ.

ಶ್ರೀ ಸಿದ್ದರಾಮಯ್ಯ : ನಾವು ಬಹಳ ಬಿಲ್‌ಗಳನ್ನು ಪಾಸು ಮಾಡಿಕೊಟ್ಟಿದ್ದೇವೆ. ನಾವು ನಿಮಗೆ Co-operate ಮಾಡಿದ್ದೇವೆ. ಮಾನ್ಯ ಅಧ್ಯಕ್ಷರೆ, ದಯವಿಟ್ಟು ಇದನ್ನು ಮುಂದಕ್ಕೆ ಹಾಕಿ, ಚರ್ಚೆ ಮಾಡೋಣ. ಬೇಕಾದಷ್ಟು ಚರ್ಚೆ ಮಾಡಿ ಬಿಲ್‌ಗಳನ್ನು ಪಾಸು ಮಾಡಿಕೊಟ್ಟಿದ್ದೇವೆ. ಇದೊಂದು ಬಿಲ್ ಅನ್ನು ಮಾತ್ರ ಮುಂದಕ್ಕೆ ಹಾಕಿ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಉದಾಹರಣೆಗೆ ಹೇಳುವುದಾದರೆ, Amendment to Section 63 ಎಂದು ಇದೆ. ಅದು ಏನೆಂದರೆ, For the words"Regional Commissioner" the word "Commissioner" shall be substituted.

ಶ್ರೀ ಸಿದ್ದರಾಮಯ್ಯ : ತಾವು ಸ್ವಲ್ಪ ನಿಧಾನವಾಗಿ ಓದಬೇಕು. ತಾವು ಅಷ್ಟು ಬೇಗನೆ ಓದಿದರೆ ನಮಗೆ ಅರ್ಥವಾಗುವುದಿಲ್ಲ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಏನ್ ಸರ್, ತಾವು expert ಆಗಿದ್ದು ನೀವು ಲಾ ಓದಿದವರಾಗಿದ್ದು ನಿಮಗೆ ನಾವು ಹೇಳಬೇಕೆ?

ಶ್ರೀ ಸಿದ್ದರಾಮಯ್ಯ : ನಾನು ಈ ಬಗ್ಗೆ ಸತ್ಯವಾಗಿ ಹೇಳುತ್ತಿದ್ದೇನೆ.

SRI BASAVARAJ S. BOMMAI : They are all small clarifications. They are not really in terms of amendment.

ಶ್ರೀ ಸಿದ್ದರಾಮಯ್ಯ : ಇದರ ಬಗ್ಗೆ I have to apply my mind. I will come back and also I must produce the judgement.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : Law language ಬರಲಿ ಎನ್ನುವಂತಹ ದೃಷ್ಟಿಯಿಂದ ಇಂತಹವುಗಳನ್ನು ಮಾಡಿರುವುದು.

ಶ್ರೀ ಸಿದ್ದರಾಮಯ್ಯ : Judgement ನೋಡಿಕೊಂಡು ಬಂದ ಮೇಲೆ ಇದನ್ನು ನೋಡೋಣ.

ಶ್ರೀ ಬಸವರಾಜ ಬೊಮ್ಮಾಯಿ : ಇದರಲ್ಲಿ Section 25 ಒಂದೇ impotant.

ಶ್ರೀ ಸಿದ್ದರಾಮಯ್ಯ : ಒಂದು ತಿಂಗಳು ಮುಂದಕ್ಕೆ ಹಾಕಿದರೆ ಏನೂ ಆಗುವುದಿಲ್ಲ. ಬಿಡಿ.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : Amendment to Section 25 is important. ಅಲ್ಲಿ ಕಮಿಟಿಯನ್ನು ಮಾಡಿದರೆ ಕೆಲಸ ಮಾಡುವುದಕ್ಕೆ ಸಾಧ್ಯ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು ಮುಂದಕ್ಕೆ ಹಾಕಿ ಎಂದು ಹೇಳಿದರೆ ಅವರು ಹಾಗೆ ಮಾಡುತ್ತಾರೆ.

ಶ್ರೀ ಎ. ಮಂಜು : ನೀವು ಹೇಳಬೇಕು ಸರ್.

ಅಧ್ಯಕ್ಷರು : ನಾನು ಆ ರೀತಿಯಾಗಿ ಹೇಳುವುದಕ್ಕೆ ಬರುವುದಿಲ್ಲ.

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ...

ಅಧ್ಯಕ್ಷರು : ನಾನು ಹೇಳಬೇಕೆಂದರೆ, I am convinced. There is no major amendment.

ಶ್ರೀ ಟಿ.ಬಿ. ಜಯಚಂದ್ರ : ನಮಗೆ explain ಮಾಡಿ ಸರ್. ನಮಗೇನೂ ತೊಂದರೆ ಇಲ್ಲ.

Dr. H.C. MAHADEVAPPA : In the interest of God and Godesses let us take it for discussion.

SRI BASAVARAJ BOMMAI : Yes. In the interest of GoD & Godsesses you pass it.

ಡಾ: ಹೆಚ್.ಸಿ. ಮಹದೇವಪ್ಪ : ಈ ಬಿಲ್ ಅನ್ನು next session ನಲ್ಲಿ ಪಾಸು ಮಾಡೋಣ.

SRI BASAVARAJ S. BOMMAI : In the interest of God & Goddess, with full trust of God and Godess we will pass this.

ಶ್ರೀ ಸಿದ್ದರಾಮಯ್ಯ : ನಾನು I demand division. ಮಾನ್ಯ ಅಧ್ಯಕ್ಷರೆ, immediately ತಾವು ಬಾಗಿಲನ್ನು ಹಾಕಿಸಿ. ನಾನು ಡಿವಿಜನ್‌ಗೆ ಡಿಮ್ಯಾಂಡ್ ಮಾಡುತ್ತೇನೆ. Put to vote.

ಶ್ರೀ ಬಸವರಾಜ ಬೊಮ್ಮಾಯಿ : ತಡೆಯಿರಿ ಸರ್, ಯಾವಾಗ place ಮಾಡಬೇಕೋ ಆಗ ಮಾಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ನಾವು ಇದುವರೆಗೂ ಸರ್ಕಾರಕ್ಕೆ Co-operate ಮಾಡಿದ್ದೇವೆ. I demand division.

ಶ್ರೀ ಬಸವರಾಜ ಎಸ್. ಬೊಮ್ಮಾಯಿ : ಆಯಿತು.

ಶ್ರೀ ಸಿದ್ದರಾಮಯ್ಯ : ಎಲ್ಲರನ್ನು ಬರಲು ಹೇಳಿ, ಬಾಗಿಲು ಹಾಕಿಸಿ.

ಡಾ: ಹೆಚ್.ಸಿ. ಮಹದೇವಪ್ಪ : ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು next ತೆಗೆದುಕೊಳ್ಳೋಣ.

ಶ್ರೀ ಸಿದ್ದರಾಮಯ್ಯ : ಎಲ್ಲರನ್ನು ಒಳಗೆ ಬರಲು ಹೇಳಿ.

ಅಧ್ಯಕ್ಷರು : ಆಯಿತು. ನಾನು division ಗೆ ಬೆಲ್ ಹಾಕುತ್ತಿದ್ದೇನೆ.

ಶ್ರೀ ಸಿದ್ದರಾಮಯ್ಯ : ನಾವು ಇದುವರೆಗೂ Co-operate ಮಾಡಿದ್ದೇವೆ ಇದನ್ನು ಮುಂದಿನ ಸಾರಿ ತೆಗೆದುಕೊಳ್ಳೋಣ ಎಂದು ಹೇಳುತ್ತಿದ್ದೇವೆ. ಇದು ಏತಕ್ಕಾಗಿ ಸುಮ್ಮನೆ ಬೇಕು? ಇದುವರೆಗೂ ಯಾವುದೇ ಬಿಲ್ ಬಗ್ಗೆ ವೋಟಿಗೆ ಹಾಕಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ : ಇದನ್ನು next ತೆಗೆದುಕೊಳ್ಳಿ.

ಶ್ರೀ ಬಸವರಾಜ್ ಎಸ್. ಬೊಮ್ಮಾಯಿ : ಮಾನ್ಯ ಆಚಾರ್ಯರವರೆ ತಾವು ಬಿಲ್ಲನ್ನು ಪರ್ಯಾಲೋಚನೆಗಾಗಿ ಮಂಡಿಸಿ.

ಶ್ರೀ ಸಿದ್ದರಾಮಯ್ಯ : ಈ ಬಿಲ್ಲನ್ನು ಮುಂದಕ್ಕೆ ಹಾಕಿ ಎಂದರೆ ಹಠ ಹಿಡಿದುಕೊಂಡು ಕುಳಿತುಕೊಂಡರೆ ಹೇಗೆ?

ಡಾ: ವಿ.ಎಸ್. ಆಚಾರ್ಯ : ಮಾನ್ಯ ಅಧ್ಯಕ್ಷರೆ, ಒಂದು ಇಲಾಖೆ ಕೆಲಸ ನಿರ್ವಹಿಸಬೇಕಾದಂತಹ ವಾತಾವರಣವನ್ನು ಮಾಡಬೇಕಾದರೆ ಇದನ್ನು ಮಾಡಲೇಬೇಕಾದಂತಹ ತಿದ್ದುಪಡಿಗಳಾಗಿವೆ. ಬಹಳ ಸಣ್ಣ ಪ್ರಾಸ್ತಾವಿಕವಾದಂತಹ ತಿದ್ದುಪಡಿಯಾಗಿದೆ. ಅವರು ಯಾವ ವಿಷಯದ ಬಗ್ಗೆ ಕೇಳಿದರೂ ಕೂಡ ನಾನು ಅದಕ್ಕೆ ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಸಿದ್ಧನಿದ್ದೇನೆ. ದಯವಿಟ್ಟು ತಾವು ಇದನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಂತಿಯನ್ನು ಮಾಡುತ್ತೇನೆ ಈ ಸದನವು ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಬಾಗಿಲನ್ನು 2 ನಿಮಿಷಗಳ ಕಾಲ open ಮಾಡಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ ತಾವು ಬಾಗಿಲನ್ನು ಹಾಕಿಸಿ.

ಅಧ್ಯಕ್ಷರು : ಮಾನ್ಯ ಸಿದ್ದರಾಮಯ್ಯನವರೆ, 2 ನಿಮಿಷಗಳು ಆಗಬೇಕಲ್ಲ? ಇದು bad precedent.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, 2 ನಿಮಿಷಗಳು ಆಯಿತು. ಬಾಗಿಲ್ಲನ್ನು ಹಾಕಿಸಿ.

ಅಧ್ಯಕ್ಷರು : ಇನ್ನೂ ಆಗಿಲ್ಲ.

ಶ್ರೀ ಸಿದ್ದರಾಮಯ್ಯ : ಬಾಗಿಲು ಹಾಕಿ.

ಅಧ್ಯಕ್ಷರು : ಬಾಗಿಲನ್ನು close ಮಾಡಿ. ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

"ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 2011ನೇ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ" ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು.
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು.

ಶ್ರೀ ಸಿದ್ದರಾಮಯ್ಯ : Voice Vote ನಲ್ಲಿ ತಾವು ತೀರ್ಮಾನ ಮಾಡಿ.

ಅಧ್ಯಕ್ಷರು : ಇಲ್ಲ. ಪ್ರಸ್ತಾವದ ಪರವಾಗಿರುವವರು ಎದ್ದು ನಿಲ್ಲಬೇಕು. Row-wise ಲೆಕ್ಕ ಮಾಡಿ.

ಮೊದಲನೆಯ row – 3+1 (ಮಾನ್ಯ ಉಪಾಧ್ಯಕ್ಷರು)
ಎರಡನೆಯ row – 5
ಮೂರನೆಯ row – 4
ನಾಲ್ಕನೆಯ row – 6
ಐದನೆಯ row – 1
ಆರನೆಯ row – 4
ಏಳನೆಯ row – 5
ಎಂಟನೆಯ row – 4

ಒಟ್ಟು – 33

ಈಗ ಪ್ರಸ್ತಾವದ ವಿರೋಧವಾಗಿರುವವರು ಎದ್ದು ನಿಲ್ಲಬೇಕು.

ಮೊದಲನೆಯ row – 6
ಎರಡನೆಯ row – 5
ಮೂರನೆಯ row – 4
ನಾಲ್ಕನೆಯ row – 8
ಐದನೆಯ row – 5
ಆರನೆಯ row – 3
ಏಳನೆಯ row – 3
ಒಟ್ಟು - 34

ಆದರೂ equal ಆದಿರಿ.

ಶ್ರೀ ಸಿದ್ದರಾಮಯ್ಯ : ಇದರಲ್ಲಿ ಬರುವುದಿಲ್ಲ.

ಡಾ: ಹೆಚ್.ಸಿ. ಮಹದೇವಪ್ಪ : No confidence Motion ಬಂದಾಗ ಮಾತ್ರ.

ಶ್ರೀ ಸಿದ್ದರಾಮಯ್ಯ : No Confidence Motion ನಲ್ಲಿ ಬರುತ್ತದೆ, ಇದರಲ್ಲಿ ಬರುವುದಿಲ್ಲ. ಡಾ: ವಿ.ಎಸ್. ಆಚಾರ್ಯರು ನಾವು ಹೇಳಿದ ಮಾತನ್ನು ಕೇಳುವುದಿಲ್ಲ.

ಅಧ್ಯಕ್ಷರು : Equal ಇದ್ದರೆ ನಾನು ವೋಟ್ ಮಾಡಬಹುದಿತ್ತು ಇಲ್ಲದೇ ಇದ್ದರೆ ಇಲ್ಲ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ತಾವು announce ಮಾಡಿ.

ಅಧ್ಯಕ್ಷರು : ಈಗ ವಿಧೇಯಕದ ಪರವಾಗಿ 33 ಮತಗಳು ಇವೆ. ವಿಧೇಯಕದ ವಿರೋಧವಾಗಿ 34 ಮತಗಳು ಇವೆ. ಹಾಗಾಗಿ ಪ್ರಸ್ತಾವನೆಯು ತಿರಸ್ಕರಿಸಲ್ಪಟ್ಟಿದೆ.

(ಪ್ರಸ್ತಾವನೆಯು ತಿರಸ್ಕರಿಸಲ್ಪಟ್ಟಿತು)